ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ 11/ಇಎಪಿ/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com
ದಿನಾಂಕ:23.07.2024

"ನೆನಪೋಲೆ-1"

## ಜ್ಞಾಪನ

ವಿಷಯ: ಸಿ-20 ಪಠ್ಯಕ್ರಮದ ಗ್ರೇಡ್ ಕಾರ್ಡ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿರುವ ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ:1) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 11/ಇಎಪಿ/2023 ದಿನಾಂಕ:06.05.2024
2) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 11/ಇಎಪಿ/2023 ದಿನಾಂಕ:05.07.2024

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಸಿ-20ಪಠ್ಯಕ್ರಮದಲ್ಲಿ 2020-21 ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಎಲ್ಲಾ ವಿಷಯಗಳಲ್ಲೂ ಉತ್ತೀರ್ಣರಾಗಿ ಡಿಪ್ಲೋಮ ವಿದ್ಯಾಭ್ಯಾಸ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳ ಎಲ್ಲಾ ಸೆಮಿಸ್ಟರ್ ಗ್ರೇಡ್ ಕಾರ್ಡ್‌ಗಳನ್ನು ಸಂಸ್ಥೆಗಳಿಗೆ ರವಾನಿಸಲಾಗಿತ್ತು. ಸದರಿ ಗ್ರೇಡ್ ಕಾರ್ಡ್‌ಗಳನ್ನು ಉಲ್ಲೇಖ (1) ರ ಅನುಸಾರ ದಿನಾಂಕ:31.05.2024 ರೊಳಗಾಗಿ ಹಾಗೂ ಉಲ್ಲೇಖ (2) ರ ಅನುಸಾರ ದಿನಾಂಕ:12.07.2024 ರೊಳಗಾಗಿ ಕಡ್ಡಾಯವಾಗಿ ವಿದ್ಯಾರ್ಥಿಗಳಿಗೆ ವಿತರಿಸಿ ಅದರ ಸಂಪೂರ್ಣ ವರದಿ ಹಾಗೂ ಗ್ರೇಡ್ ಕಾರ್ಡ್‌ಗಳನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರಗಳನ್ನು ಮಂಡಳಿಗೆ ಸಲ್ಲಿಸಲು ಸೂಚಿಸಲಾಗಿತ್ತು.

ಆದರೆ ಇದುವರೆಗೂ ಕೆಲವು ಸಂಸ್ಥೆಗಳ ಪ್ರಿನ್ಸಿಪಾಲರುಗಳು ಮಾತ್ರ ಸ್ವೀಕೃತಿ ಮತ್ತು ವಿದ್ಯಾರ್ಥಿಗಳಿಗೆ ಗ್ರೇಡ್ ಕಾರ್ಡ್‌ಗಳನ್ನು ವಿತರಿಸಿರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಇನ್ನುಳಿದ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಿನ್ಸಿಪಾಲರುಗಳು ಕೇವಲ ಇಲಾಖೆಯಿಂದ ಗ್ರೇಡ್ ಕಾರ್ಡ್ ಸ್ವೀಕರಿಸಿರುವ ಬಗ್ಗೆ ಮಾತ್ರ ಮಾಹಿತಿ ನೀಡಿರುತ್ತಾರೆ. ಆದ್ದರಿಂದ ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳು ಇಲಾಖೆಯಿಂದ ಗ್ರೇಡ್ ಕಾರ್ಡ್‌ಗಳನ್ನು ಸ್ವೀಕರಿಸಿರುವ ಬಗ್ಗೆ ಸ್ವೀಕೃತಿ ಪತ್ರವನ್ನು ಹಾಗೂ ಗ್ರೇಡ್ ಕಾರ್ಡ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿರುವ ಬಗ್ಗೆ ವರದಿಯನ್ನು ದಿನಾಂಕ:29.07.2024 ರೊಳಗಾಗಿ ತಪ್ಪದೇ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ, ಪ್ರಾಂಶುಪಾಲರನ್ನು ನೇರ ಜವಾಬ್ದಾರರನ್ನಾಗಿಸಿ, ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಬೆಂಗಳೂರು

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು
– ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ